# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

(ಹಿಂದಿನ ಪದನಾಮ - 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

**ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156**

(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)

# KITTURU RANI CHANNAMMA UNIVERSITY

*(Formerly known as 'Rani Channamma University, Belagavi')*

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**



**E-mail:**academic@rcub.ac.in
registrar@rcub.ac.in

**ಕುಲಸಚಿವರ ಕಾರ್ಯಾಲಯ**
**Office of the Registrar**

**Website:** www.rcub.ac.in
**Phone No.: 0831-2565241**
**0831-2565258**


ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿಮವಿ/ಸ್ನಾತಕೋತ್ತರ/2026-27/ 4453 **ದಿನಾಂಕ:** -1 OCT 2026

## ಸುತ್ತೋಲೆ

**ವಿಷಯ**: 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸನ ಪ್ರಥಮ ಸೆಮಿಸ್ಟರಗೆ PGCET ಕೋಟಾದಡಿಯಲ್ಲಿ ಪ್ರವೇಶಾತಿ ಪಡೆಯುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:01-10-2026

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಂ.ಬಿ.ಎ ಮತ್ತು ಗಣಕವಿಜ್ಞಾನ ವಿಭಾಗಗಳ ಮುಖ್ಯಸ್ಥರು, ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ವಿಜಯಪುರ ಹಾಗೂ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳ ಸಂಯೋಜಿತ ಎಂ.ಬಿ.ಎ/ಎಂ.ಸಿ.ಎ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರು/ಸಂಯೋಜಕರಿಗೆ ಈ ಮೂಲಕ ತಿಳಿಸುವುದೇನೆಂದರೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (KEA-PGCET) ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ ಪ್ರವೇಶಾತಿಯನ್ನು ನೀಡುವುದು ಹಾಗೂ ಸಂಬಂಧಿಸಿದ ಪ್ರವೇಶಾತಿ ಶುಲ್ಕಗಳನ್ನು ಭರಿಸಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ (ಶುಲ್ಕಗಳ ಪಟ್ಟಿ ಲಗತ್ತಿಸಿದೆ).

### ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಸೂಚನೆಗಳು:

1. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ, ಏಕರೂಪ ಶುಲ್ಕದನ್ವಯ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಭರಣ ಮಾಡಿದ ವ್ಯತ್ಯಾಸದ ಮೊತ್ತವನ್ನು GATEWAY ಮೂಲಕ ಈ ಕೆಳಗೆ ವಿವರಿಸಲಾದ ಹಂತವನ್ನು ಅನುಸರಿಸಿ ಪ್ರವೇಶ ಶುಲ್ಕವನ್ನು ಪಾವತಿಸುವುದು. ಸದರಿ ಮಾಹಿತಿಯನ್ನು UUCMS ತಂತ್ರಾಂಶದಲ್ಲಿ (ಶುಲ್ಕ ಭರಣಾ ವಿವರ) ನಮೂದಿಸಲು ಈ ಮೂಲಕ ಸೂಚಿಸಲಾಗಿದೆ.
    a. ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-201– **Admission or Registration Fees.**
    b. ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-302 –**Eligibility Certificate Fees**
2. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದ ಒಳಗಿರುವ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆದಿರುವ ಹಾಗೂ FREESHIP CARD ನ್ನು ಹೊಂದಲು ಅರ್ಹರಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಕೋರ್ಸುಗಳಿಗೆ ಅನ್ವಯಿಸುವ ಶುಲ್ಕಗಳನ್ನು ಮಾತ್ರ ಭರಣಾ ಮಾಡಿಸಿಕೊಂಡು ಪ್ರವೇಶಾತಿ ನೀಡುವುದು. (ಸದರಿ ಅರ್ಹ ವಿದ್ಯಾರ್ಥಿಗಳಿಂದ ಈ ಪತ್ರದೊಂದಿಗೆ ಲಗತ್ತಿಸಲಾದ ಮುಚ್ಚಳಿಕೆ ಪತ್ರವನ್ನು ಭರಿಸಿಕೊಳ್ಳುವುದು).

3. ಶುಲ್ಕ ವಿನಾಯಿತಿ ಪಡೆದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (https://ssp.postmatric.karnataka.gov.in/) ಕಡ್ಡಾಯವಾಗಿ ಅರ್ಜಿ ಸಲ್ಲಿಸುವಂತೆ ಅವಕಾಶ ಕಲ್ಪಿಸುವುದು, ಹಾಗೂ ಅರ್ಜಿ ಸಲ್ಲಿಸಿದ ಒಂದು ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಗೆ ಅಥವಾ ಮಹಾವಿದ್ಯಾಲಯಗಳಿಗೆ ಸಲ್ಲಿಸುವಂತೆ ಕ್ರಮಕೈಗೊಳ್ಳುವುದು.
4. ಸಮಾಜ ಕಲ್ಯಾಣ ಇಲಾಖೆಯು DBT ಮೂಲಕ ಸದರಿ ವಿದ್ಯಾರ್ಥಿಗಳಿಗೆ ಪಾವತಿಸಿದ ವಿದ್ಯಾರ್ಥಿ ವೇತನದ ಬಗ್ಗೆ ಮಾಹಿತಿಯನ್ನು ಖಚಿತಪಡಿಸಿಕೊಂಡ ನಂತರ ವಿದ್ಯಾರ್ಥಿಯಿಂದ ಸದರಿ ಮೊತ್ತವನ್ನು ಸ್ನಾತಕೋತ್ತರ ವಿಭಾಗ ಅಥವಾ ಮಹಾವಿದ್ಯಾಲಯಗಳು ಮರುಪಾವತಿ ಮಾಡಿಕೊಳ್ಳುವುದು.
5. ಒಂದು ವೇಳೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ ಪಾವತಿಯಾದ ನಂತರವೂ, ವಿನಾಯಿತಿ ಶುಲ್ಕಗಳನ್ನು ಮರುಪಾವತಿ ಮಾಡದೇ ಇರುವ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಸಲ್ಲಿಸುವುದು ಹಾಗೂ ಅಂತಹ ವಿದ್ಯಾರ್ಥಿಗಳ ಮೇಲೆ ಸೂಕ್ತ ಕ್ರಮವಹಿಸುವುದು.
6. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು, ಸದರಿ ಕೋರ್ಸನ್ನು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಅರ್ಧಕ್ಕೆ ಮೊಟಕುಗೊಳಿಸುವಂತಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಗಳಿಂದ ಕೋರ್ಸನ್ನು ಮೊಟಕುಗೊಳಿಸಬೇಕಾಗಿ ಬಂದಲ್ಲಿ ವಿನಾಯಿತಿ ಪಡೆಯಲಾದ ಸಂಪೂರ್ಣ ಶುಲ್ಕವನ್ನು ವಿಭಾಗ ಅಥವಾ ಮಹಾವಿದ್ಯಾಲಯಗಳಿಗೆ ಪಾವತಿಸುವಂತೆ ಕ್ರಮಕೈಗೊಳ್ಳುವುದು.
7. ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಹಾಗೂ ಬಾಗಲಕೋಟ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಪದವಿ ಪಡೆದಿರುವ ಅಭ್ಯರ್ಥಿಗಳು ಕಡ್ಡಾಯವಾಗಿ, ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರವನ್ನು (Eligibility Certificate) ಪಡೆಯಬೇಕಾಗಿರುತ್ತದೆ.
8. ಅರ್ಹತಾ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ, ಪದವಿ ಅಂಕಪಟ್ಟಿಗಳಿಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯಕ್ಕೆ ಅನುಮಾನ ಬಂದಲ್ಲಿ ವಿಶ್ವವಿದ್ಯಾಲಯವು ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ನೈಜತೆ ಪರಿಶೀಲನೆಗೆ ಕಳುಹಿಸಿಕೊಡಲಾಗುವುದು ಹಾಗೂ ಅಂತಹ ಪರವಿ ಅಂಕಪಟ್ಟಿಗಳ ನೈಜಿತೆ ಪರಿಶೀಲನೆಗೆ ಸಂಬಂಧಿಸಿದ ವಿವಿಧ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ನೈಜತೆ ಪ್ರಮಾಣ ಪತ್ರದ ಶುಲ್ಕಗಳನ್ನು (ಅರ್ಹತಾ ಪ್ರಮಾಣ ಪತ್ರ, ಶುಲ್ಕ ಹೊರತುಪಡಿಸಿ) ಸದರಿ ಅಭ್ಯರ್ಥಿಗಳೇ ಭರಿಸಬೇಕು. ಪದವಿ ಅಂಕಪಟ್ಟಿಗಳ ನೈಜತೆ ಕುರಿತು ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ನೈಜತಾ ಪ್ರಮಾಣ ಪತ್ರ ಬಂದ ನಂತರ. ಸದರಿ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಒಂದು ವೇಳೆ ಪದವಿ ಅಂಕಪಟ್ಟಿಗಳು ನಕಲು ಅಥವಾ ತಿದ್ದುಪಡಿಯಾಗಿರುವ ಅಥವಾ ಸುಳ್ಳು ಪದವಿ ಅಂಕಪಟ್ಟಿಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಅಭ್ಯರ್ಥಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.
9. ಅರ್ಹತಾ ಪ್ರಮಾಣ ಪತ್ರ ಪಡೆಯಲು 10 ಮತ್ತು 12ನೇ ತರಗತಿಯ ಹಾಗೂ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಪದವಿಯ ಎಲ್ಲ ಅಂಕಪಟ್ಟಿಗಳು ಹಾಗೂ ವಲಸೆ ಪ್ರಮಾಣ ಪತ್ರ (Migration Certificate), ಮೂಲ ಪ್ರತಿಗಳೊಂದಿಗೆ ದೃಢೀಕರಿಸಿದ ಪ್ರತಿಗಳು, ಗುರುತಿನ ಚೀಟಿಗಾತ್ರದ ಒಂದು ಭಾವಚಿತ್ರವನ್ನು ಸಲ್ಲಿಸಬೇಕು. ಹಾಗೂ ಸದರಿ ವಿಷಯಕ್ಕೆ ನಿಗದಿಪಡಿಸಲಾದ ಶುಲ್ಕ ಭರಿಸಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದು.

**ಅರ್ಹತಾ ಪ್ರಮಾಣ ಪತ್ರಗಳ ಶುಲ್ಕಗಳ ವಿವರ;**

| ಕ್ರ.ಸಂ | ವಿವರ | ಎಂ.ಬಿ.ಎ ಕೋರ್ಸ | ಎಂ.ಸಿ.ಎ ಕೋರ್ಸ |
|---|---|---|---|
| 01 | ಕರ್ನಾಟಕ ವಿದ್ಯಾರ್ಥಿಗಳು | ರೂ.3,820/- | ರೂ.3,470/- |
| 02 | ಕರ್ನಾಟಕೇತರ ವಿದ್ಯಾರ್ಥಿಗಳು | ರೂ.6,360/- | ರೂ.11,550/- |
| 03 | ಅನಿವಾಸಿ ಭಾರತೀಯರು | ರೂ.12,710/- | ರೂ.17,330/- |
| 04 | ವಿದೇಶಿ ವಿದ್ಯಾರ್ಥಿಗಳು | ರೂ.19,060/- | ರೂ.23,100/- |

೧೦. ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರಗಳನ್ನು "ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ" (UUCMS) ತಂತ್ರಾಂಶದಲ್ಲಿ ವಿಶ್ವವಿದ್ಯಾಲಯ ಸೂಚಿಸಿದ ದಿನಾಂಕಗಳೊಳಗಾಗಿ ನಮೂದಿಸುವುದು.

11. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in ವೆಬ್ ಸೈಟ್‌ನಲ್ಲಿ ನೋಡುವುದು, ಮತ್ತು ವಿಶ್ವವಿದ್ಯಾಲಯದ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಎಲ್ಲ ಆದೇಶಗಳನ್ನು ಕಡ್ಡಾಯವಾಗಿ ಅನುಸರಿಸುವುದು.

12. ಎಂ.ಬಿ.ಎ ಮತ್ತು ಎಂ.ಸಿ.ಎ ವಿಭಾಗಗಳು/ಮಹಾವಿದ್ಯಾಲಯದವರು ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ವಿವರಗಳನ್ನು ಸಲ್ಲಿಸುವಾಗ ಪ್ರತಿ ವಿದ್ಯಾರ್ಥಿವಾರು ಶುಲ್ಕ ಭರಣಾ ವಿವರವನ್ನು (ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಭರಿಸಿದ ಮೊತ್ತ, ವ್ಯತ್ಯಾಸದ ಮೊತ್ತ ಹಾಗೂ ವಿಭಾಗ/ಮಹಾವಿದ್ಯಾಲಯಗಳಲ್ಲಿ ಭರಿಸಲಾದ ಮೊತ್ತ ಸಲ್ಲಿಸುವುದು.

13. UUCMS ತಂತ್ರಾಂಶದಲ್ಲಿ ಯಾವುದಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ನಂ: 0831-2565257 ಹಾಗೂ Mail ID uucms@rcub.ac.in ಅನ್ನು ಸಂಪರ್ಕಿಸುವುದು.

**ಉಪಕುಲಸಚಿವರು**

**ಇವರಿಗೆ,**

1. ಮುಖ್ಯಸ್ಥರು, ಆಡಳಿತ ಮತ್ತು ಗಣಕವಿಜ್ಞಾನ ವಿಭಾಗಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ವಿಜಯಪುರ.
3. ಪ್ರಾಚಾರ್ಯರು/ಸಂಯೋಜಕರು, ಸಂಯೋಜಿತ ಎಂ.ಬಿ.ಎ/ಎಂ.ಸಿ.ಎ ಮಹಾವಿದ್ಯಾಲಯಗಳು, ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆ.
4. ನೋಡಲ್ ಅಧಿಕಾರಿಗಳು, UUCMS ತಂತ್ರಾಂಶ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಪ್ರತಿ ಮಾಹಿತಿಗಾಗಿ**

- ಕುಲಸಚಿವರು (ಮೌಲ್ಯಮಾಪನ), ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಹಣಕಾಸು ಅಧಿಕಾರಿಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮುಖ್ಯಸ್ಥರು/ಸಂಯೋಜಕರು, ಐ.ಟಿ ಕೋಶ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮುಖ್ಯಸ್ಥರು/ಸಂಯೋಜಕರು, ಇ-ವಿದ್ಯಾ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ಕುಲಪತಿಗಳ ಸಚಿವಾಲಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮಾನ್ಯ ಕುಲಸಚಿವರ ಕಾರ್ಯಾಲಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ರಕ್ಷಾ ಪ್ರತಿ.